**ದಿನಾಂಕಃ 21.02.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ ಎಸ್.ಎಂ. – 1 ಮತ್ತು 2 ನೇ ಎದುರುದಾರರ ಪರ ವಕೀಲರಿಂದ**

ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯಗಳು ಮತ್ತು ನಾನು ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನನಗೆ ಗೊತ್ತಿದೆ. ಅಪಘಾತವು ಹೆಮ್ಮಿಗೆ ಗ್ರಾಮದ ಪಂಚಾಯಿತಿ ಬಳಿಯಾಗಿರುತ್ತದೆ.

ಅಪಘಾತದ ದಿನ ನಾನು ಹೆಮ್ಮಿಗೆಯಿಂದ ತಲಕಾಡಿಗೆ ಹೋಗುತ್ತಿದ್ದೆ. 1 ನೇ ಎದುರುದಾರ ನನ್ನ ಎದುರಿಗೆ ಬರುತ್ತಿದ್ದರು. ಮೋಟಾರ್ ಸೈಕಲ್ ಸಂಖ್ಯೆ ಕೆಎ–55/ವಿ–8212 ನ್ನು ನಾನೇ ಚಾಲನೆ ಮಾಡಿದ್ದೆ. ನನಗೆ ಚಾಲನಾ ಪರವಾನಗಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ಮೋಟಾರ್ ಸೈಕಲ್‌ಗೆ ಚಾಲನಾ ಪರವಾನಗಿ ಇತ್ತು.

ನಾನು ನನ್ನ ಮೋಟಾರ್ ಸೈಕಲ್‌ನ್ನು ಗಂಟೆಗೆ 30 ಕಿ.ಮೀ. ವೇಗದಲ್ಲಿ ಚಾಲನೆ ಮಾಡಿದ್ದೆ. ನಾನು ಹೆಲ್ಮೆಟ್ ಧರಿಸಿದ್ದೆ. ನಾನು ಹಾಜರುಪಡಿಸಿರುವ ಪೊಲೀಸ್ ದಾಖಲೆಗಳಲ್ಲಿ ನಾನು ಹೆಲ್ಮೆಟ್ ಧರಿಸಿದ್ದೆ ಎಂದು ನಮೂದು ಇಲ್ಲ ಎಂದರೆ ಸರಿಯಲ್ಲ.

ನಾನು ನನ್ನ ಮೋಟಾರ್ ಸೈಕಲ್‌ಗೆ ವಿಮೆ ಹೊಂದಿರಲಿಲ್ಲ, ನನಗೆ ಚಾಲನಾ ಪರವಾನಗಿ ಇರಲಿಲ್ಲ ಮತ್ತು ನಾನು ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ.

ಅಪಘಾತವಾದ ನಂತರ ಆ ಕುರಿತು ನಾನು ಪೊಲೀಸರಿಗೆ ಮತ್ತು ವೈದ್ಯರಿಗೆ ಹೇಳಿಕೆ

ನೀಡಿದ್ದೆ. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ.

ಬೇರೆ ಬೇರೆ ಊರುಗಳಿಗೆ ನಮ್ಮ ಊರಿನ ಮೂಲಕ ಹೋಗಬಹುದು ಎಂದರೆ ಸರಿ. ನಮ್ಮ ಊರಿನ ರಸ್ತೆಗಳಲ್ಲಿ ಬಹಳಷ್ಟು ತಿರುವುಗಳು ಇವೆ ಎಂದರೆ ಸರಿ.

ಅಪಘಾತ ಸ್ಥಳದ ರಸ್ತೆಯಲ್ಲಿ ಉಬ್ಬು ಇದೆ ಎಂದರೆ ಸರಿಯಲ್ಲ. ಆ ರಸ್ತೆಯು 12 ಅಡಿ ಅಗಲದ ಡಾಂಬರ್ ರಸ್ತೆ ಎಂದರೆ ಸರಿ. ರಸ್ತೆಯ ಅಕ್ಕಪಕ್ಕ ಗಿಡಮರಗಳು ಬೆಳೆದಿವೆ ಎಂದರೆ ಸರಿ. ನನ್ನ ಮುಂದಿನ ರಸ್ತೆ ನೇರವಾಗಿತ್ತು ಎಂದರೆ ಸರಿ. 1 ನೇ ಎದುರುದಾರನ ಮುಂದಿನ ರಸ್ತೆಯು ತಿರುವು ಬಂದಿತ್ತು ಎಂದರೆ ಸರಿ. ಹಾಗಾಗಿ ಅವರು ತನ್ನ ಮೋಟಾರ್ ಸೈಕಲ್‌ನ್ನು ನಿಧಾನವಾಗಿ ಚಾಲನೆ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ಮುಂದಿನ ರಸ್ತೆಯು ನೇರವಾಗಿದ್ದರಿಂದ ನಾನು ನನ್ನ ಮೋಟಾರ್ ಸೈಕಲ್‌ನ್ನು ಅತಿವೇಗವಾಗಿ ಚಾಲನೆ ಮಾಡಿ 1 ನೇ ಎದುರುದಾರನ ಮೋಟಾರ್ ಸೈಕಲ್‌ಗೆ ಡಿಕ್ಕಿ ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಅಪಘಾತವು ನನ್ನ ತಪ್ಪಿನಿಂದ ಆಗಿದ್ದು, 1 ನೇ ಎದುರುದಾರನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರೊಂದಿಗೆ ಶಾಮೀಲಾಗಿ 1 ನೇ ಎದುರುದಾರನನ್ನು ಆರೋಪಿತನ್ನಾಗಿ ಮಾಡಲಾಗಿದೆ ಎಂದರೆ ಸರಿಯಲ್ಲ.

ಅಪಘಾತವಾದ ನಂತರ ನಾನು ತಿ. ನರಸೀಪುರದ ಸರ್ಕಾರಿಗೆ ಆಸ್ಪತ್ರೆಗೆ ದಾಖಲಾಗಿದ್ದೆ. ಅಲ್ಲಿನ ವೈದ್ಯರಿಗೆ ಅಪಘಾತದ ಕುರಿತು ಹೇಳಿದ್ದೆ. ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಆಸ್ಪತ್ರೆಯಿಂದ ಮುಂದಿನ ಚಿಕಿತ್ಸೆಗೆ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಹೋಗಿದ್ದೆ. ಅಲ್ಲಿ ಅವರು ನನಗೆ ಚಿಕಿತ್ಸೆ ನೀಡದ ಕಾರಣ ಮೈಸೂರಿನ ಬೃಂದಾವನ ಆಸ್ಪತ್ರೆಗೆ ಹೋಗಿದ್ದು,

ಅವರು ಚಿಕಿತ್ಸೆ ನೀಡದ ಕಾರಣ ಮೈಸೂರಿನ ಡಿ.ಆರ್.ಎಂ. ಆಸ್ಪತ್ರೆಗೆ ದಾಖಲಾದೆನು. ಅಲ್ಲಿ ನನಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ನನಗೆ ಗೊತ್ತಿಲ್ಲ. ಆ ಆಸ್ಪತ್ರೆಯಲ್ಲಿ ನಾನು 12 ದಿನಗಳವರೆಗೆ ಒಳರೋಗಿಯಾಗಿದ್ದೆ. ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಕತ್ತಿನ ಕೆಳಭಾಗದಲ್ಲಿ ಮೂಳೆ ಮುರಿತವಾಗಿಲ್ಲ ಮತ್ತು ನಾನು ಶಸ್ತ್ರಚಿಕಿತ್ಸೆಗೆ ಒಳಪಟ್ಟಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಗಾಯಗಳು ಆಗಿಲ್ಲ ಎಂದರೆ ಸರಿಯಲ್ಲ. ನನಗೆ ಪ್ಲಾಸ್ಟಿಕ್ ಸರ್ಜರಿ ಆಗಿಲ್ಲ ಎಂದರೆ ಸರಿಯಲ್ಲ. ನನಗೆ ರೂ.4.00 ಲಕ್ಷ ಆಸ್ಪತ್ರೆ ಖರ್ಚಿಗೆ ಆಗಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ದಿನಕ್ಕೆ ರೂ.800-00 ಸಂಪಾದನೆಯನ್ನು ಎಲೆಕ್ಟ್ರಿಷಿಯನ್ ಕೆಲಸದಿಂದ ಗಳಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಆ ಕೆಲಸ ಮಾಡಲು ಯಾವುದೇ ಪರವಾನಗಿ ಇಲ್ಲ. ಹಾಗಾಗಿ, ಆ ಕೆಲಸ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈಗಲೂ ಕೂಡ ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖದ ಸೌಂದರ್ಯ ಎಂದಿನಂತೆ ಇದೆ ಎಂದರೆ ಸರಿಯಲ್ಲ. ನನಗೆ ಯಾವುದೇ ದೈಹಿಕ ನ್ಯೂನತೆ ಇಲ್ಲ ಎಂದರೆ ಸರಿಯಲ್ಲ.

ಪರಿಹಾರ ಪಡೆಯುವ ಸಲುವಾಗಿ ಸುಳ್ಳು ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಹಾಗಾಗಿ, ನಾನು ಯಾವುದೇ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಎಂ.ಎ.ಸಿ.ಟಿ., ತಿ.ನರಸೀಪುರ.**